ರಾಮನಗರ ಜಿಲ್ಲಾ ಪೊಲೀಸ್

## ಪತ್ರಿಕಾ ಪ್ರಕಟಣೆ

### ಮನೆ ಕಳ್ಳತನ ಮಾಡಿದ್ದ ಆರೋಪಿಯ ಬಂಧನ

ಐಜೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಮನೆ ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ ಮೊ.ನಂ-13/2021 ಕಲಂ 454, 380 ಐಪಿಸಿ, ಮೊ. ನಂ-54/2020 ಕಲಂ 454.380 ಐಪಿಸಿ ಮತ್ತು ಮೊ.ನಂ -10/2021 ಕಲಂ-379 ಐಪಿಸಿ ಪ್ರಕರಣಗಳ ಪತ್ತೆಗಾಗಿ ಪೊಲಿಸ್ ಅಧೀಕ್ಷಕರಾದ ಶ್ರೀ.ಎಸ್ ಗಿರೀಶ್ ಐಪಿಎಸ್ ಮತ್ತು ರಾಮನಗರ ಉಪವಿಭಾಗದ ಡಿವೈಎಸ್.ಪಿ ಶ್ರೀ.ಮೋಹನಕುಮಾರ್ ರವರ ಮಾರ್ಗದರ್ಶನದಲ್ಲಿ ರಾಮನಗರ ಪುರ ವೃತ್ತ ನಿರೀಕ್ಷಕರಾದ ಶ್ರೀ ಮೋಹನರೆಡ್ಡಿ, ಐಜೂರು ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀಮತಿ. ಶುಭಾಂಭಿಕ, ಹಾಗೂ ಸಿಬ್ಬಂದಿಗಳ ವಿಶೇಷ ತಂಡವನ್ನು ರಚನೆ ಮಾಡಿದ್ದು, ಸದರಿ ತಂಡವು ವಿವಿಧ ಆಯಾಮಗಳಲ್ಲಿ ಮಾಹಿತಿ ಕಲೆಹಾಕಿ ಪ್ರಕರಣಗಳನ್ನು ಭೇದಿಸಿ ಆರೋಪಿ ಪ್ರವೀಣ್ ಕುಮಾರ ಜೈನ್ ಬಿನ್ ಗೀಸುಲಾಲ್ ಎಂಬಾತನನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುತ್ತಾರೆ.

ಬಂಧಿತ ಆರೋಪಿಯಿಂದ 06 ಲಕ್ಷ ಮೌಲ್ಯದ 128 ಗ್ರಾಂ ಚಿನ್ನದ ವಡವೆಗಳು ಹಾಗೂ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿದ್ದ 07 ದ್ವಿಚಕ್ರ ವಾಹನಗಳನ್ನು ವಶ ಪಡಿಸಿಕೊಳ್ಳಲಾಗಿದೆ.

